**ಪಿ ಡಬ್ಲೂ : 1**

ಸಾಕ್ಷಿಗೆ ದಿನಾಂಕಃ **25.10.2025** ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಹೆಚ್.ಪಿ. ವಕೀಲರಿಂದ:**

9) ನಾನು 3ನೇ ತರಗತಿಯನ್ನು ಬ್ಲಪ್ ಶಾಲೆಯಲ್ಲಿ 1955-56 ನೇ ಸಾಲಿನಲ್ಲಿ ಓದಿರುತ್ತೇನೆ. ಆ ಸಂಬಂದವಾಗಿ ದಾಖಲೆ ಸಿಕ್ಕಿದರೆ ಹಾಜರುಪಡಿಸಲು ತಯಾರು ಇರುತ್ತೇನೆ. ನಮ್ಮ ಇಲಾಖೆಯಿಂದ ದಾಖಲೆಗಳು ಬೇರೆ ಕಡೆ ಹೋಗಿರುವುದರಿಂದ ನಾನು ದಾಖಲೆ ಹಾಜರುಪಡಿಸಲು ಅಗುವುದಿಲ್ಲ. ನಾನು ಬ್ಲಪ್ ನಲ್ಲಿ ವಿದ್ಯಾಭ್ಯಾಸ ಮಾಡದೇ ಇರುವ ಕಾರಣ ನಾನು ಹಾಜರುಪಡಿಸಲು ಸಾದ್ಯವಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು ಹಾಜರುಪಡಿಸಿದರೆ ನಾನು ಎಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ ಎಂದು ಗೊತ್ತಾಗುತ್ತದೆ ಎಂದು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. 1979 ರಿಂದ 2008 ವರೆಗೆ ನಾನು ಶಿಂಷಾ ವಸತಿಗೃಹದಲ್ಲಿ ವಾಸವಾಗಿದ್ದೆ. ಅಲ್ಲಿ ಕರ್ತವ್ಯ ನಿರ್ವಹಿಸುವವರಿಗೆ ವಸತಿ ಗೃಹದ ವ್ಯವಸ್ಥೆಯನ್ನು ಮಾಡಿರುತ್ತಾರೆ ಎಂದರೆ ಸರಿ. ನನ್ನ ತಂದೆ ಬ್ಲಪ್ ನಲ್ಲಿ ಕರ್ತವ್ಯದಲ್ಲಿ ಇದ್ದರು. ಅವರು ಅತಿಥಿ ಗೃಹದಲ್ಲಿ ಕೆಲಸ ಮಾಡುತ್ತಿದ್ದರು. ನಾನು ನಿವೃತ್ತಿ ಹೊಂದಿದ ನಂತರ ಜಮೀನನ್ನು ಮಾರಾಟ ಮಾಡಿರುತ್ತೇನೆ. ಆ ಸಂಬಂದವಾಗಿ ದಾಖಲೆ ಹಾಜರುಪಡಿಸಿರುವುದಿಲ್ಲ. ಅದನ್ನು ಈ ದಿನ ಹಾಜರುಪಡಿಸಲು ತೊಂದರೆ ಇರಲಿಲ್ಲ.

10) ನಾನು ಬೆಂಗಳೂರಿನ ವ್ಯಕ್ತಿಗೆ ಅಸ್ತಿಯನ್ನು ಮಾರಾಟ ಮಾಡಿರುತ್ತೇನೆ. ಅವರ ಹೆಸರು ಸುಂದ್ರಯ್ಯ ಮತ್ತು ಜ್ಯೋತಿ ಅಗಿರುತ್ತದೆ. ನಾನು ಮಾರಾಟ ಮಾಡಿದ ದಿನಾಂಕವನ್ನು ಹೇಳಲಾಗುವುದಿಲ್ಲ. ಸದರಿ ಸ್ವತ್ತಿನ ಸರ್ವೆ ನಂ.82 ಅಗಿರುತ್ತದೆ. ಅದು ಒಟ್ಟು 2 ಎಕರೆ ಇತ್ತು. ಅದು ಸ್ವಯಾರ್ಜಿತ ಸ್ವತ್ತು ಅಗಿರುತ್ತದೆ. ಸದರಿ ಸ್ವತ್ತನ್ನು ಯಾವ ಇಸವಿಯಲ್ಲಿ ಖರೀದಿ ಮಾಡಿರುತ್ತೇನೆಂದು ಗೊತ್ತಿರುವುದಿಲ್ಲ. ನಾನು 2 ಎಕರೆಗೆ ಒಟ್ಟಾಗಿ 35 ಸಾವಿರ ರೂಪಾಯಿಗಳಿಗೆ ಹಲಸಹಳ್ಳಿ ಗ್ರಾಮದ ಶೇಖರಯ್ಯ ರವರಿಂದ ಖರೀದಿ ಮಾಡಿದ್ದೆ. ನಾನು ನಗದು ರೂಪದಲ್ಲಿ ಕ್ರಯದ ಮೊತ್ತವನ್ನು ಪಾವತಿ ಮಾಡಿದ್ದೆ. ನನಗೆ ಅರ್.ಬಿ.ಐ. ನಿಯಮಗಳ ಬಗ್ಗೆ ಗೊತ್ತು ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 20 ಸಾವಿರ ರೂಪಾಯಿಗಿಂತ ಹೆಚ್ಚಿನ ವ್ಯವಹಾರ ಮಾಡಿದರೆ ಚೆಕ್ಕು ಅಥವಾ ಡಿ.ಡಿ. ಮೂಲಕ ಮಾಡಬೇಕು ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ಬ್ಯಾಂಕಿನಲ್ಲಿ ಸಾಲ ಪಡೆದು ಅಸ್ತಿಯನ್ನು ಖರೀದಿ ಮಾಡಿದ್ದೆ.

11) ನಾನು 20 ಲಕ್ಷ ರೂಪಾಯಿಗಳಿಗೆ ಜಮೀನನ್ನು ಮಾರಾಟ ಮಾಡದೇ ಇದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕಟ್ಟಿಸಿದ ಮನೆಯ ಜಾಗವು ನನ್ನ ಸ್ವಂತ ಅಸ್ತಿ ಅಗಿರುತ್ತದೆ. ನಾನು ಎಸ್.ಬಿ.ಐ, ನಲ್ಲಿ ಸಾಲ ಪಡೆದಿದ್ದೆ.

ಮುಂದುವರೆದ ಪಾಟೀ ಸವಾಲಿಗೆ  ಸಮಯ ಕೋರಿದ್ದು, ಸಕಾರಣ ಇಲ್ಲವಾದ ಕಾರಣ ಮುಂದುವರೆದ ಪಾಟೀ ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಮಳವಳ್ಳಿ